**ದಿಃ 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4 ರಿಂದ 14 ರ ಪರ ವಕೀಲರಿಂದಃ**

1) ನಾನು 2 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಸಹಿ ಮಾಡುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳು ಆಂಗ್ಲ ಭಾಷೆಯಲ್ಲಿದ್ದು ಅವುಗಳು ನನಗೆಗೊತ್ತಿಲ್ಲ ಎಂದರೆ ಸರಿ. ನಮಗೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರುತ್ತವೆ. ಸದರಿ ಬೇರೆ ಆಸ್ತಿಗಳು ಒಟ್ಟು 5 ಎಕರೆ ವಿಸ್ತೀರ್ಣದ್ದವಾಗಿರುತ್ತವೆ. ಸದರಿ 5 ಎಕರೆ ಆಸ್ತಿಗೆ 2 ನೇ ವಾದಿ , 15 ನೇ ಪ್ರತಿವಾದಿ, 1 ರಿಂದ 3 ನೇ ಪ್ರತಿವಾದಿಗಳ ತಂದೆ ಸಿದ್ದಪ್ಪನ ಹೆಸರು ನಮೂದಾಗಿರುತ್ತದೆ. 1 ರಿಂದ 3 ನೇ ಪ್ರತಿವಾದಿಗಳ ತಂದೆ ಸದರಿ ಸಿದ್ದಪ್ಪಾ ಎಷ್ಟು ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ ನನಗೆಗೊತ್ತಿಲ್ಲ. 2 ನೇ ವಾದಿ ಹಾಗೂ 15 ನೇ ಪ್ರತಿವಾದಿ ನನಗೆ ದಾವೆ ನಡೆಸಲು ಮುಕ್ತ್ಯಾರ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಸದರಿ ಸಿದ್ದಪ್ಪಾ ಮರಣ ಹೊಂದಿದ ನಂತರ ಅವರ ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಗಳ ಹೆಸರು ವಾರಸಾ ನಾತೆಯಿಂದ ನಮೂದಾಗಿರುತ್ತದೆ. ಎಷ್ಟು ವರ್ಷಗಳ ಹಿಂದೆ ವಾರಸಾ ನಾತೆಯಿಂದ ಸದರಿ ಪ್ರತಿವಾದಿಗಳ ಹೆಸರು ನಮೂದಾಗಿರುತ್ತದೆ ಎಂದು ನನಗೆಗೊತ್ತಿಲ್ಲ. ಸದರಿ 5 ಎಕರೆ ಜಮೀನನ್ನು 2 ನೇ ವಾದಿ, 15 ನೇ ಪ್ರತಿವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಪಾಲು ವಿಭಾಗ ಮಾಡಿಕೊಂಡಿದ್ದು, ನನಗೆ ಯಾವುದೇ ಪಾಲನ್ನು ಕೊಟ್ಟಿರುವುದಿಲ್ಲ. ಸದರಿ ಪಾಲನ್ನು ನೀಡದ ಬಗ್ಗೆ ನಾನು ಪ್ರಸ್ತುತ ದಾವೆಯನ್ನು 2 ನೇ ವಾದಿ, 15 ನೇ ಪ್ರತಿವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಸಲ್ಲಿಸಿರುತ್ತೇನೆ. ಸದರಿ 5

ಎಕರೆಯ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿ ರುವುದಿಲ್ಲ. ಸದರಿ ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ. ನಾನು ಪ್ರಸ್ತುತ ದಾವೆಯನ್ನು ಸರ್ವೆ ನಂಬರ 310 ರಲ್ಲಿ ಪಾಲು ಬೇಕು ಎಂದು ಕೇಳಿ ದಾವೆ ಸಲ್ಲಿಸಿರುತ್ತೇನೆ. ನಮ್ಮ ವಕೀಲರು ನನಗೆ ದಾವೆಯ ವಾದ ಪತ್ರದ ವಿಷಯಗಳನ್ನು ಓದಿ ಹೇಳಿರುತ್ತಾರೆ. ಸದರಿ 5 ಎಕರೆ ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಲು ಮರೆತ ಕಾರಣ ಹಾಗೆ ಸೇರಿಸದೆ ಬಿಟ್ಟಿರುತ್ತೇನೆ. ಈಗಲೂ ಸಹ ನಾನು ಸದರಿ 5 ಎಕರೆ ಆಸ್ತಿಯನ್ನು ದಾವೆಯಲ್ಲಿ ಸೇರಿಸುವುದಿಲ್ಲ. ನನ್ನ ಹಾಗೂ 2 ನೇ ವಾದಿ ಮತ್ತು 1 ರಿಂದ 3, 15 ನೇ ಪ್ರತಿವಾದಿಗಳ ನಡುವೆ ಸಂಬಂಧ, ಸರಿ ಇರುತ್ತದೆ.

2) ನನಗೆ ಒಟ್ಟು ನಾಲ್ಕು ಮಕ್ಕಳಿದ್ದು, ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಇಬ್ಬರು ಗಂಡು ಮಕ್ಕಳು ಬೇರೆ ಕಡೆ ದುಡಿಯಲು, ಗಾಡಿ ನಡೆಸಲು ಹೋಗುತ್ತಾರೆ. ನನ್ನ ಒಬ್ಬ ಹೆಣ್ಣು ಮಗಳ ಆಗಿದ್ದು, ಇನ್ನೊಬ್ಬ ಮಗಳ ಮದುವೆ ಆಗಿರಲಿಲ್ಲ. ನನ್ನ ಇಬ್ಬರು ಗಂಡು ಮಕ್ಕಳ ಮದುವೆ ಆಗಿದ್ದು ಮೊಮ್ಮಕ್ಕಳು ಇರುತ್ತಾರೆ. ನನ್ನ ಒಬ್ಬ ಮಗಳು ಮಾತ್ರ ಶಾಲೆ ಓದುತ್ತಿದ್ದು ಉಳಿದವರು ಓದಿರುವುದಿಲ್ಲ.

3) ನಾನು ಯಾವುದೇ ಸಮಯದಲ್ಲಿಯೂ ನಮ್ಮ ಆಸ್ತಿಗಳ ಉತಾರೆಗಳನ್ನು ತೆಗೆಸಿರುವುದಿಲ್ಲ ಈ ಒಂದು ವರ್ಷದ ಹಿಂದೆ ನಾನು ಉತಾರೆಯನ್ನು ತೆಗೆದು ನೋಡಿರುತ್ತೇನೆ. ಸದರಿ ಉತಾರೆಗಳನ್ನು ನಾನು ನನ್ನ ಜಮೀನುಗಳು ಎಲ್ಲಿ ಇರುತ್ತವೆ ಎಂದು ನೋಡಲು ತೆಗೆಸಿರುತ್ತೇನೆ. ನನಗೆ ಈಗ ಸುಮಾರು ಅಂದಾಜು 61-62

ವರ್ಷ ವಯಸ್ಸಾಗಿರಬಹುದು. ನನಗೆ 25 ವರ್ಷವಿದ್ದಾಗ ಮದುವೆಯಾಗಿರುತ್ತದೆ. ನನ್ನ ಮಕ್ಕಳಲ್ಲಿ ಮೊದಲನೆಯವಳು ಮಗಳಾಗಿರುತ್ತಾರೆ. ನನ್ನ ಮಗಳ ಮದುವೆಯಾದಾಗ ಅವಳಿಗೆ 25 ವರ್ಷ ವಯಸ್ಸಾಗಿರಬಹುದು. ನನ್ನ ಮಗಳ ಮದುವೆಯಾಗಿ ಸುಮಾರು 10 ವರ್ಷಗಳು ಆಗಿರಬಹುದು. ನನ್ನ ಹಾಗೂ ನನ್ನ ಕುಟುಂಬದವರ ಆಧಾರ ಕಾರ್ಡಗಳು ಇರುತ್ತವೆ. ಅದೇ ರೀತಿ ಪಡಿತರ ಚೀಟಿಯು ಇರುತ್ತದೆ. ನನ್ನ ಮನೆಯ ವ್ಯವಹಾರವನ್ನು ನಾನೇ ಮಾಡುತ್ತೇನೆ. ನಾನು ತಳಕಟ್ನಾಳ ಸೊಸಾಯಟಿಯಿಂದ ಸಾಲ ಪಡೆದಿರುತ್ತೇನೆ. ನಾನು ಈ ಒಂದೂವರೆ ವರ್ಷಗಳ ಹಿಂದೆ ಮೊದಲ ಬಾರಿಗೆ ಸಾಲವನ್ನು ಪಡೆದಿರುತ್ತೇನೆ. ನನ್ನ ಮಕ್ಕಳಿಗೆ ಮೊದಲ ಬಾರಿಗೆ ನಮ್ಮ ಊರಿನಲ್ಲಿ ಶಾಲೆಗೆ ಪ್ರವೇಶ ಪಡೆಯಲು ನಾನು ಹೋಗಿದ್ದೆ. ಆ ಸಮಯದಲ್ಲಿ ನಾನು ನನ್ನ ಮಕ್ಕಳ ಜನನ ದಾಖಲೆಯನ್ನು ನೀಡಿರುವುದಿಲ್ಲ. ನನಗೆ ಕನ್ನಡ ಬರೆಯಲು, ಓದಲು ಬರುತ್ತಿದ್ದರೂ ಸಹ ಬರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4) ಅಪ್ಪಯ್ಯಾ ನನ್ನ ಅಜ್ಜ. ನನ್ನ ಅಜ್ಜ ನಾನು ಹುಟ್ಟುವ ಮೊದಲೇ ಮರಣ ಹೊಂದಿದ್ದರು. ನನ್ನ ತಂದೆಯ ಸಹೋದರ ಹಣಮಂತಪ್ಪಾ ಮರಣ ಹೊಂದಿದ್ದು ಯಾವ ವರ್ಷದಲ್ಲಿ ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ನನ್ನ ತಂದೆ ಯಾವ ವರ್ಷದಲ್ಲಿ ಮರಣ ಹೊಂದಿರುತ್ತಾರೆ ಗೊತ್ತಿಲ್ಲ. ಸದರಿಯವರಿಬ್ಬರೂ ಒಂದೇ ತಿಂಗಳಿನಲ್ಲಿ ತಳಕಟ್ನಾಳನಲ್ಲಿ ಮರಣ ಹೊಂದರುತ್ತಾರೆ. ಅವರು ಮರಣ ಹೊಂದಿದಾಗ ನನಗೆ ನನ್ನ ಮಕ್ಕಳು ಜನಿಸಿರಲಿಲ್ಲ. ನನ್ನ ತಂದೆ ಹಾಗೂ ದೊಡ್ಡಪ್ಪನ ಮರಣ ಉತಾರೆಗಳನ್ನು

ಹಾಜರುಪಡಿಸಿರುವುದಿಲ್ಲ. ಸದರಿ ಹಣಮಂತಪ್ಪಾ ಅವರ ಪತ್ನಿಯ ಹೆಸರು ದೇವಕ್ಕಾ ಎಂದರೆ ಸರಿ. ದೇವಕ್ಕಾ ಸಹ ಮರಣ ಹೊಂದಿರುತ್ತಾರೆ. ನನ್ನ ತಾಯಿ ಕೆಂಚವ್ವಾ ಸಹ ಮರಣ ಹೊಂದಿರುತ್ತಾರೆ, ಅವರಿಬ್ಬರು ಯಾವಾಗ ಮರಣಹೊಂದಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ನಾನು ವಾರಸಾ ಮಾಡಿಕೊಂಡಿರುವುದಿಲ್ಲ. ನನ್ನ ಅಣ್ಣಂದಿರು ಮಾಡಿರಬಹುದು ನನಗೆ ಗೊತ್ತಿಲ್ಲ. ನಮ್ಮ ಸಂಬಂಧಿಗಳಲ್ಲಿ ಭೀಮಪ್ಪಾ ಮಲ್ಲಪ್ಪಾ ಮುತ್ತೆಣ್ಣವರ ಎಂಬ ಹೆಸರಿನ ವ್ಯಕ್ತಿ ನಾನೊಬ್ಬನೇ ಇರುತ್ತೇನೆ. ನನ್ನ ದೊಡ್ಡಪ್ಪ ಹಣಮಂತಪ್ಪನವರಿಗೆ ಮಕ್ಕಳು ಇರಲಿಲ್ಲ. ನನ್ನ ಅಣ್ಣ ಸಿದ್ದಪ್ಪನ ಮಗ ಮಾರುತಿ 1 ನೇ ಪ್ರತಿವಾದಿ ಸದರಿ ನನ್ನ ದೊಡ್ಡಪ್ಪ ಹಣಮಂತಪ್ಪನವರಿಗೆ ದತ್ತಕಕ್ಕೆ ಹೋಗಿರುವುದಿಲ್ಲ. ನನ್ನ ದಾವೆಯಲ್ಲಿ 1 ನೇ ಪ್ರತಿವದಿಯನ್ನು ಹಣಮಂತಪ್ಪನವರ ಪತ್ನಿ ದೇವಕ್ಕಾ ದತ್ತಕಕ್ಕೆ ಪಡೆದಿದ್ದರು ಎಂದು ಹೇಳಿರುವುದಿಲ್ಲ. ದತ್ತಕ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯ ಹೆಸರು ಕಂದಾಯ ದಾಖಲೆಗಳಲ್ಲಿ ದತ್ತಕ ಹೆಸರು ಮಾರುತಿ ಹಣಮಂತ ಮುತ್ತೆಣ್ಣವರ ಎಂದು ಇರುತ್ತದೆ ಎಂದರೆ ಸರಿ. ನನ್ನ ದೊಡ್ಡಮ್ಮ ಸದರಿ ದೇವಕ್ಕಾ 1 ನೇ ಪ್ರತಿವಾದಿಯ ದತ್ತಕ ಪತ್ರವನ್ನು ಪ್ರಶ್ನಿಸಿರುವುದಿಲ್ಲ. 1 ನೇ ಪ್ರತಿವಾದಿಯ ಜನಕ ತಂದೆ ತಾಯಿಯು ಸಹ ಸದರಿ ದತ್ತಕವನ್ನು ಪ್ರಶ್ನಿಸಿ ದಾವೆ ಹೂಡಿರುವುದಿಲ್ಲ. 1 ನೇ ಪ್ರತಿವಾದಿಯು ಸಹ ಸದರಿ ರೀತಿಯ ದಾವೆಯನ್ನು ಹೂಡಿರುವುದಿಲ್ಲ. 1 ನೇ ಪ್ರತಿವಾದಿಯನ್ನು ದೇವಕ್ಕಾ ದತ್ತಕಕ್ಕೆ ಪಡೆದಿರುತ್ತಾರೆ ಎನ್ನುವ ವಿಷಯ ನಮಗೆ ಗೊತ್ತಿಲ್ಲದ ಕಾರಣ ನಾವು ಸದರಿ ದತ್ತಕವನ್ನು ಪ್ರಶ್ನಿಸಿರುತ್ತೇವೆ. ನನ್ನ ತಾತ ಅಪ್ಪಯ್ಯನಿಗೆ ಇದ್ದ ಇಬ್ಬರು ಮಕ್ಕಳಿಗೆ ಅರ್ಧ ಅರ್ಧ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿಯು ಸ್ವತಃ ಮುಂದುವರೆದು ಯಾವುದೇ ಪಾಲು ಆಗಿರುವುದಿಲ್ಲ, ಜಂಟಿಯಾಗಿ ಒಕ್ಕಲುತನ ಮಾಡುತ್ತಿರುವುದಾಗಿ ನುಡಿಯುತ್ತಾರೆ. ಸದರಿ ನನ್ನ ತಾತನ ಇಬ್ಬರು ಮಕ್ಕಳ ಕುಟುಂಬದವರು ಜಂಟಿಯಾಗಿ ಒಕ್ಕಲುತನ ಮಾಡುತ್ತಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ. ನಾನು ಹಾಗೂ ನನ್ನ ಸಹೋದರರು ಎಲ್ಲರೂ ಪ್ರತ್ಯೇಕವಾಗಿ ವಾಸಿಸುತ್ತೇವೆ. 1 ನೇ ಪ್ರತಿವಾದಿ ಈ ಮೇಲೆ ಹೇಳಿದ ಪ್ರತ್ಯೇಕ 5 ಎಕರೆ ಜಮೀನಿನಲ್ಲಿ ವಾಸವಿರುತ್ತಾರೆ. 15 ನೇ ಪ್ರತಿವಾದಿ ತಳಕಟ್ನಾಳನಲ್ಲಿ ವಾಸವಿರುತ್ತಾರೆ. 2 ನೇ ವಾದಿ ಫುಲಗಡ್ಡಿಯಲ್ಲಿ ವಾಸವಿರುತ್ತಾರೆ. ನಾನು ತಳಕಟ್ನಾಳನ 1 ನೇ ವಾರ್ಡನಲ್ಲಿ ವಾಸವಿರುತ್ತೇನೆ. 2 ಮತ್ತು 3 ನೇ ಪ್ರತಿವಾದಿಗಳು ತಳಕಟ್ನಾಳನಲ್ಲಿಯೇ ವಾಸವಿರುತ್ತಾರೆ. ನಾವು ಎಲ್ಲರೂ ಸುಮಾರು 10 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿರುತ್ತಿದ್ದೇವೆ. ನಾನು ಹಾಗೂ ನನ್ನ ಸಹೋದರರು ಯಾವುದೇ ಕಾರ್ಯಕ್ರಮ ಮಾಡುವಾಗ ನಮ್ಮ ನಮ್ಮ ಖರ್ಚುಗಳನ್ನು ನಾವೇ ನೋಡಿಕೊಂಡು ಆದರೆ ಎಲ್ಲರೂ ಭಾಗಿಯಾಗಿ ಕಾರ್ಯಕ್ರಮಗಳನ್ನು ಮಾಡುತ್ತೇವೆ. ನಾವೆಲ್ಲರೂ ಜಂಟಿಯಾಗಿ ಆಸ್ತಿಗಳನ್ನು ಹೊಂದಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ. ನಾವು ಜಂಟಿಯಾಗಿ ಒಕ್ಕಲುತನ ಮಾಡುವ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ನಾವೆಲ್ಲರೂ ಜಂಟಿಯಾಗಿ ಒಕ್ಕಲುತನ ಮಾಡುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಿಂದ 14 ಗಳಲ್ಲಿ ಯಾರ ಹೆಸರುಗಳು ನಮೂದಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳನ್ನು ನಾನು ಹೇಳಿದ ಸರ್ವೆ ನಂಬರಗಳ ಆಧಾರದ ಮೇಲೆ ನನ್ನ ವಕೀಲರೆ ಪಡೆದಿರುತ್ತಾರೆ. ಸದರಿ ಸರ್ವೆ ನಂಬರ ಎಂದರೆ ಸರ್ವೇ ನಂಬರ 310 ಆಗಿರುತ್ತದೆ. ಈಗ ಅದು ಸರ್ವೆ ನಂಬರ 58

ಆಗಿರುತ್ತದೆ. ಸರ್ವೆ ನಂಬರ 310 ತಳಕಟ್ನಾಳ ವ್ಯಾಪ್ತಿಯಲ್ಲಿ ಇದ್ದು ಈಗ ಸರ್ವೆ ನಂಬರ 58 ಆದ ನಂತರ ಕಪರಟ್ಟಿ ವ್ಯಾಪ್ತಿಯಲ್ಲಿ ಬಂದಿರುತ್ತದೆ. ಸರ್ವೇ ನಂಬರ 310 ರಲ್ಲಿ ಎಷ್ಟು ಹಿಸ್ಸೆಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸದರಿ ಹಿಸ್ಸೆಗಳ ಬಗ್ಗೆ ನನ್ನ ವಕೀಲರು ನನಗೆ ಹೇಳಿದ್ದು ನನಗೆ ತಿಳಿದಿರುವುದಿಲ್ಲ. ನಿಪಿ–1 ರಿಂದ 14 ಗಳಲ್ಲಿ ಯಾರ ಹೆಸರುಗಳು ನಮೂದಾಗಿರುತ್ತವೆ ಎಂದು ನನ್ನ ವಕೀಲರಿಂದ ನಾನು ತಿಳಿದುಕೊಂಡಿರುವುದಿಲ್ಲ.

5) 4 ರಿಂದ 8 ನೇ ಪ್ರತಿವಾದಿಗಳು ಕೆಂಚಪ್ಪನ ಮಕ್ಕಳು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಅವರು ಕಪರಟ್ಟಿಯಲ್ಲಿ ವಾಸವಿರಬಹುದು, ಆದರೆ ನಿಖರವಾಗಿ ಅವರ ವಾಸದ ಬಗ್ಗೆ ನನಗೆ ಮಾಹಿತಿ ಇಲ್ಲ. 4 ರಿಂದ 8 ನೇ ಪ್ರತಿವಾದಿಗಳ ವಿಳಾಸ ವಾದ ಪತ್ರದಲ್ಲಿ ಬರೆದಿರುವ ಬಗ್ಗೆ ನನ್ನ ವಕೀಲರಿಗೆ ತಿಳಿದಿರುತ್ತದೆ. ನ್ಯಾಯಾಲಯದ ಮುಂದಿರುವ 4 ರಿಂದ 8 ನೇ ಪ್ರತಿವಾದಿಗಳು ಯಾರು ಮತ್ತು ಯಾವ ಊರಿನಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ 9 ರಿಂದ 14 ನೇ ಪ್ರತಿವಾದಿಗಳ ಬಗ್ಗೆಯೂ ಸಹ ನನಗೆ ಗೊತ್ತಿಲ್ಲ. ದಾವೆ ಸಲ್ಲಿಸುವ ಸಮಯದಲ್ಲಿ ಅವರು ಎಲ್ಲಿರುತ್ತಾರೆ ಎಂದು ನನ್ನ ವಕೀಲರೆ ವಾದ ಪತ್ರದಲ್ಲಿ ತೋರಿಸಿರುತ್ತಾರೆ. ನಿಪಿ–1 ರಿಂದ 14 ಗಳಲ್ಲಿ 9 ಮತ್ತು 12 ನೇ ಕಾಲಮಗಳಲ್ಲಿ 4 ರಿಂದ 14 ನೇ ಪ್ರತಿವಾದಿಗಳ ಹೆಸರುಗಳು ನಮೂದಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ಯೂನಿಯನ್ ಬ್ಯಾಂಕ್ ಆಫ ಇಂಡಿಯಾದಿಂದ ಸಾಲವನ್ನು ಪಡೆದಿರುವುದಿಲ್ಲ. ಸಾಮಾನ್ಯವಾಗಿ ಬ್ಯಾಂಕ ಹಾಗೂ ಸೊಸಾಯಟಿಯವರು ಸಾಲ ನೀಡುವಾಗ ವ್ಯಕ್ತಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿರುವ ಬಗ್ಗೆ ಖಚಿತಪಡಿಸಿಕೊಂಡು ಸಾಲ

ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಿಂದ 14 ಪಹಣಿಗಳ ಜಮೀನುಗಳ ಮೇಲೆ ಯೂನಿಯನ್ ಬ್ಯಾಂಕ್ ಆಫ ಇಂಡಿಯಾದ ಋಣಭಾರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಒಟ್ಟು ವಿಸ್ತೀರ್ಣ 13 ಎಕರೆ 4 ಗುಂಟೆ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ 310 ಕ್ಕೆ 1981, 1984, 1987 ನೇ ಸಾಲಿನಿಂದ ನನ್ನದಾಗಲೀ, ನನ್ನ ಸಹೋದರರದಾಗಲೀ, 1 ನೇ ಪ್ರತಿವಾದಿಯ ಹೆಸರಾಗಲೀ ನಮೂದಿರುವುದಿಲ್ಲ ಎಂದರೆ ಸಾಕ್ಷಿ ಹಿಂದಿನ ಉತಾರೆಗಳು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಸದರಿ ಸಾಲಿನ ಪಹಣಿಗಳು ಒದಗಿಸುವಂತೆ ಕೇಳಿದಾಗ ಅವುಗಳು ಲಭ್ಯವಿರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ಅಧಿಕಾರಿಗಳಿಗೆ ಉತಾರೆ ಒದಗಿಸುವಂತೆ ಕೇಳಿದ ದಾಖಲೆಯನ್ನು ನನ್ನ ವಕೀಲರು ನ್ಯಾಯಾಲಯಕ್ಕೆ ಹಾಜರಪಡಿಸಿರಬಹುದು. ನನ್ನ ವಕೀಲರು ಪರಿಶೀಲನೆ ಮಾಡಿದಾಗ ದಾವಾ ಸ್ವತ್ತಿಗೆ ಸಂಬಂಧಿಸಿದದಂತೆ 1981 ರ ಹಿಂದಿನ ಉತಾರೆಗಳು ಇದ್ದು, ಕೇವಲ 1978 ರಿಂದ 1985 ರ ಸಾಲಿನ ಉತಾರೆಗಳು ಮಾತ್ರ ಲಭ್ಯವಿರುವುದಿಲ್ಲ ಆದರೆ 1985 ರಿಂದ ಮುಂದಿನ ಸಾಲಿನ ಉತಾರೆಗಳು ಲಭ್ಯವಿರುತ್ತವೆ. 1985 ರಿಂದ ಇಲ್ಲಿಯವರೆಗಿನ ಉತಾರೆಗಳನ್ನು ನನ್ನ ವಕೀಲರು ಹಾಜರು ಪಡಿಸಿದ್ದು ನನಗೆ ಗೊತ್ತಿಲ್ಲ. 1985 ರಿಂದ ಇಲ್ಲಿಯವರೆಗಿನ ಉತಾರೆಗಳಲ್ಲಿ ಯಾರ ಹೆಸರು ನಮೂದು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ 58 ರಲ್ಲಿ ಎಷ್ಟು ಹಿಸ್ಸೆಗಳಾಗಿರುತ್ತವೆ ಎಂದು ನನ್ನ ವಾದಪತ್ರದಲ್ಲಿ ನನ್ನ ವಕೀಲರೇ ಮಾಹಿತಿ ಬರೆದಿರುತ್ತಾರೆ.

ಸರ್ವೆ ನಂಬರ 58 ರಲ್ಲಿ 58/1 ರಿಂದ 58/14 ಎಂದು 14 ಹಿಸ್ಸೆಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದ ವಿಷಯಗಳನ್ನು ನಾನು ಓದಿಸಿಯೂ ತಿಳಿದುಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿಯ ವಿಷಯಗಳು ನನಗೆ ತಿಳಿದಿವೆ. ನನ್ನ ಪ್ರಮಾಣ ಪತ್ರದಲ್ಲಿ ಸದರಿ ಹಿಸ್ಸೆಗಳ ಬಗ್ಗೆ ಬರೆಸಿರುವುದಿಲ್ಲ. ಅದೇ ರೀತಿ ನನ್ನ ಪ್ರಮಾಣ ಪತ್ರದಲ್ಲಿ ದತ್ತಕ ಪತ್ರ ಹಾಗೂ ಖರೀದಿ ಪತ್ರದ ಬಗ್ಗೆ ಬರೆಯಿಸಿರುವುದಿಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ